# ಮಾಸ ಭವಿಷ್ಯ

**ಆಗಸ್ಟ್**, 2019

## ಮೇಷ




ಮಂದಮಾರುತದಂತೆ ನಿಮ್ಮೊಡಲೊಳಗೆ ಅವಿತು ಕುಳಿತ ಅಶುಭಗಳೆಲ್ಲಾ ಹೊರಬೀಳಲಿವೆ. ವಿಚಲಿತರಾಗದಿರಿ. ವಾತಾವರಣದ ಬದಲಾವಣೆಯಿಂದ ಮನೆಯಲ್ಲಿ ಪ್ರಗತಿಯಾಗಲಿದೆ. ನಿಧಾನವಾಗಿ ಗುರಿ ತಲುಪುವುದು ಕ್ಷೇಮ.

**ಶುಭ:** 1, 12, 11

**ಅಶುಭ:** 6, 8, 18

## ಕರ್ಕಾಟಕ



ದೈವಾರಾಧನೆಯ ಅಗತ್ಯ ಮುಂದುವರೆಯಲಿದೆ. ಕುಟುಂಬ, ಸಂಪತ್ತು ಮತ್ತು ಮನೆಯ ರಕ್ಷಣೆಯ ಜವಾಬ್ದಾರಿ ನಿಮ್ಮ ಮೇಲಿದೆ. ವ್ಯಾವಹಾರಿಕವಾಗಿ ಲಾಭವೂ ಇಲ್ಲ, ನಷ್ಟವೂ ಇಲ್ಲ. ತಾಳ್ಮೆ ಇರಲಿ. ದೇವರ ಸ್ಮರಣೆ ಮಾಡಿ.

**ಶುಭ:** 4, 8, 12

**ಅಶುಭ:** 14, 9, 20

## ವೃಷಭ



ಕ್ರಮಿಸದೇ ಇರಲು ಬಯಸಿದ ದಾರಿಯನ್ನು ಕ್ರಮಿಸಬೇಕಾದ ಪ್ರಸಂಗ ಬಂದೊದಗಬಹುದು. ನಿರಾಸಕ್ತಿ ಯಾವುದಕ್ಕೂ ಪರಿಹಾರವಲ್ಲ. ಕಣ್ಣಿನ ತೊಂದರೆಯನ್ನು ನಿರ್ಲಕ್ಷಿಸದಿರಿ. ಮಂಗಳಕಾರ್ಯವನ್ನು ಮುಂದೆ ಹಾಕಿ.

**ಶುಭ:** 3, 16, 19

**ಅಶುಭ:** 12, 21, 23

## ಸಿಂಹ



ಶುಭಫಲಗಳು ಬಾಗಿಲಲ್ಲಿ ನಿಂತಿವೆ. ನೀವೇ ಧೈರ್ಯದಿಂದ ಕರೆತನ್ನಿ. ಇಲ್ಲದಿರುವುದರ ಕುರಿತ ಬೇಸರಕ್ಕಿಂತ ಮುಂದೆ ಇರುವುದರ ಬಗ್ಗೆ ಸಂತಸವಿರಲಿ. ಪ್ರಾತಃಕಾಲದಲ್ಲಿ ಬೇಗನೆದ್ದು ಇಷ್ಟದೇವರನ್ನು ನೆನೆಯಿರಿ.

**ಶುಭ:** 5, 20, 10

**ಅಶುಭ:** 4, 12, 13, 24

## ಮಿಥುನ



ಬಯಕೆಯೂ, ಕಾಲವೂ ಸರಿಯಾಗಿ ಮೇಳೈಸಿದೆ. ಆಸೆಗಳ ಶುಭಾರಂಭ ಮಾಡಿ. ಪ್ರಚಾರಕ್ಕಿಂತ ಮೊದಲು ಕೆಲಸಕ್ಕೆ ಆದ್ಯತೆ ಕೊಡಿ. ತಿಂಗಳಾಂತ್ಯದಲ್ಲಿ ಶುಭ ಫಲಗಳಿವೆ. ಸಂಗಾತಿಯೊಡನೆ ಹೆಚ್ಚಿನ ಕಾಲ ಕಳೆಯಿರಿ. ಕುಟುಂಬದಲಿ ಸಂತಸ.

**ಶುಭ** : 13, 23, 6

**ಅಶುಭ:** 4, 7, 24

## ಕನ್ಯಾ



ಲಾಭ ನಷ್ಟಗಳ ಬಗ್ಗೆ ತಲೆಕೆಡಿಸಿಕೊಳ್ಳದೇ ಮುಂದಿರುವ ಆಪತ್ತಿನಿಂದ ಪಾರಾಗುವುದು ಹೇಗೆಂದು ವಿಚಾರ ಮಾಡಿ. ಸದ್ಯಕ್ಕೆ ನಿಮ್ಮ ಎಣಿಕೆಯಂತೆ ಯಾವುದೂ ನಡೆಯದು. ಪ್ರವಾಹದ ವಿರುದ್ಧ ಈಜು ಬೇಡ.

**ಶುಭ:** 6, 18, 24

**ಅಶುಭ:** 5, 11, 21